**ಗೌರವಾನ್ವಿತ 2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ.**

**O.S.No.** 1318/2012

**DW**-1

ದಿಃ 11-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ . S.C. J.ವಕೀಲರಿಂದ.**

1. ನಿಡಿಃ 1 ರ ಖರೀದಿ ಪತ್ರದ ಮುನ್ನ ಸುಮಾರು ಇಪ್ಪತ್ತು ವರ್ಷಗಳಿಂದ ಖರೀದಿ ಪತ್ರದಲ್ಲಿನ ಸ್ವತ್ತು ನನ್ನ ಸ್ವಾಧೀನದಲ್ಲಿ ಇತ್ತು. ಖರೀದಿ ಪತ್ರದ ಮುನ್ನ ಕ್ರಯ ಕರಾರು ಪತ್ರ ಆದ ಬಗ್ಗೆ ನನಗೆ ಗೊತ್ತಿಲ್ಲ. ಖರೀದಿ ಕರಾರು ಪತ್ರದ ಆಧಾರದಲ್ಲಿ ಖರೀದಿ ಪತ್ರಕ್ಕೂ ಮುನ್ನ ಇಪ್ಪತ್ತು ವರ್ಷಗಳಿಂದ ಸ್ವತ್ತಿನ ಸ್ವಾಧೀನದಲ್ಲಿ ಇದ್ದೇನು ಎಂದರೆ ಸರಿಯಲ್ಲ. ಖರೀದಿ ಪತ್ರದಲ್ಲಿ ನಮೂದಿಸಿದ ಹಣವನ್ನು ಯಾವುದೆ ಬ್ಯಾಂಕನಿಂದ ನಗದೀಕರಿಸಿಕೊಂಡಿಲ್ಲ ಅದು ನನ್ನ ಬಳಿಯೇ ಇತ್ತು. ನನ್ನ ಬಳಿ ಹಣ ಇದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಲು ಆಗುವುದಿಲ್ಲ. ವಾದಿ ಮತ್ತು ಮೂರನೇ ಪ್ರತಿವಾದಿ ಹಣ ನೀಡಿದ್ದರಿಂದ ನನ್ನ ಬಳಿ ಹಣವಿದ್ದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ತಮ್ಮ ನೌಕರಿ ಮಾಡುತ್ತಿದ್ದು ನಾನು ಊರಿನಲ್ಲಿ ಇದ್ದ ಕಾರಣ ನನ್ನ ಹೆಸರಿನಲ್ಲಿ ಸ್ವತ್ತನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸ್ವತ್ತನ್ನು ಖರೀದಿ ಮಾಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**O.S.No.** 1318/2012
**DW**-1

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ.**
**ಸಹಿ/-**
**2 ನೇ ಹೆಚ್ಚುವರಿ ನ್ಯಾಯಾಲಯ ಮತ್ತು**
**ಜೆ ಎಮ್ ಎಫ್ ಸಿ, ಬೆಳಗಾವಿ**